ದಿನಾಂಕ 03.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನಾನು ಜನಿಸಿದ ದಿನಾಂಕದ ಬಗ್ಗೆ ಯಾವುದೆ ದಾಖಲೆಗಳಿಲ್ಲ. ನಾನು ಜನಿಸಿದ ದಿನ, ತಿಂಗಳು ಮತ್ತು ವರ್ಷ ನನಗೆ ಹೇಳಲಾಗುವುದಿಲ್ಲ. ನಾನು ಸಿದ್ದಪ್ಪನ ಹೆಂಡತಿಯೆಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿಲ್ಲ. ಮಲ್ಲಪ್ಪನಿಗೆ 05-ಜನ ಮಕ್ಕಳಿದ್ದ ಬಗ್ಗೆ ನನ್ನ ಬಳಿ ಯಾವುದೆ ದಾಖಲೆಗಳಿಲ್ಲ. ಸಾತಮ್ಮಳು ಹೊನ್ನಪ್ಪನ ಹೆಂಡತಿಯೆಂದು ತೋರಿಸಲು ಯಾವುದೆ ದಾಖಲೆಗಳಿಲ್ಲ. ಸಾಕ್ಷಿ ಮುಂದುವರೆದು ಸಾತಮ್ಮಳು ಹೊನ್ನಪ್ಪನಿಗೆ ಮೊದಲೆ ಹೆಂಡತಿ ಎಂದು ಹೇಳುತ್ತಾರೆ. ಸಾತಮ್ಮಳು ಹೊನ್ನಪ್ಪನೊಂದಿಗೆ ಮದುವೆಯಾದ ದಿನಾಂಕ, ತಿಂಗಳು, ವರ್ಷ ನನಗೆ ಗೊತ್ತಿಲ್ಲ ಮತ್ತು ಅವರ ಮದುವೆ ಕರಕಿಹಳ್ಳಿಯಲ್ಲಿ ಆಗಿದೆ ಎಂದು ತೋರಿಸಲು ಯಾವುದೆ ದಾಖಲೆಗಳಿಲ್ಲ. ವಾದಿ ಮತ್ತು 2 ಮತ್ತು 3ನೆ ಪ್ರತಿವಾದಿಯರಿಗೆ ಎಷ್ಟು ವರ್ಷ ಆಗಿರುತ್ತದೆ ಎಂದು ನಾನು ಯಾವುದೆ ದಾಖಲೆಗಳನ್ನು ನೋಡಿಲ್ಲ.

ಪ್ರಸ್ತುತ ದಾವೆಯನ್ನು ಯಾರು ಯಾರ ವಿರುದ್ದ ದಾವೆ ದಾಖಲಿಸಿದ್ದಾರೆ ಎಂದರೆ ಸಾಕ್ಷಿ ರಮೇಶರವರು ರೇವಣಸಿದ್ದರವರ ಮೇಲೆ ಹಾಕಿರುತ್ತಾರೆ ಎಂದು ಹೇಳುತ್ತಾರೆ ಮತ್ತು ಯಾವ ಸರ್ವೆ ನಂಬರಗಳ ಮೇಲೆ ದಾವೆ ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನಗೆ ಸಾಕ್ಷಿ ನುಡಿಯಲು ವಾದಿ ಕರೆದಿರುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ವಾದಿಯೆ ಬರೆಸಿರುತ್ತಾರೆ ಎಂದರೆ ಸರಿ. ವಾದಿಯ ಮಾತು ಕೇಳಿಕೊಂಡು ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯ ಬಗ್ಗೆ ನನಗೆ ಮಾಹಿತಿಯಿಲ್ಲದಿದ್ದರೂ ಸಹ ವಾದಿಯ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಸ್ತತ ನನ್ನ ವಯಸ್ಸು 80 ವರ್ಷ ಆಗಿರಬಹುದು. ಪ್ರಸ್ತುತ ದಾವೆಯಲ್ಲಿರುವ ಹೊನ್ನಪ್ಪನಿಗೆ ಎಷ್ಟು ವಯಸ್ಸಾಗಿದೆ ಎಂದು ನನಗೆ ಗೊತ್ತಿಲ್ಲ. ಸಾತಮ್ಮಳು ಬದುಕಿರುವಾಗಲೆ ಹೊನ್ನಪ್ಪನು ಪಾರ್ವತಿಯನ್ನು ಮದುವೆಯಾಗಿದ್ದಾನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೊನ್ನಪ್ಪನಿಗೆ ಪಾರ್ವತಿ ಮಾತ್ರ ಹೆಂಡತಿ ಎಂದರೆ ಸರಿಯಲ್ಲ. 4 ರಿಂದ 10ನೆ ಪ್ರತಿವಾದಿಯರು ಪಾರ್ವತಿ ಮತ್ತು ಹೊನ್ನಪ್ಪರವರ ಮಕ್ಕಳು ಎಂದರೆ ಸರಿ. ಸಾತಮ್ಮ ಮತ್ತು ಪಾರ್ವತಿರವರು ಮೃತಪಟ್ಟಾಗಿ ಅವರ ವಯಸ್ಸು ಎಷ್ಟಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಮದುವೆ ಸಿದ್ದಪ್ಪರವರ ಜೊತೆ ಆಗಿದ್ದು ಹೊನ್ನಪ್ಪ ಮತ್ತು ಸಾತಮ್ಮರವರ ಮದುವೆ ಒಟ್ಟಿಗೆ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ.

ಮರುವಿಚಾರಣೆ: ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ